ಮದ್ದಗಿರಿ ಡಿಪೋ 15ನೇ ಡಿಸೆಂಬರ್ 1896ನೇ ಇಸವಿ.

ತರಹೆ.	ನಂಬರ್.	ಸಲೆ.			ಮಣ.	ಸೇರು.
		ಅಡಿ.	ಅಂಗುಲ.	ಸೆಂಟ್ಸ್.		
ಜೇನುತುಪ್ಪ ..	..	..	..	..	29	1
ಜೇನು ಮೇಣ ..	..	..	..	..	4	21
ತ್ಯಾಗದ ತೀರುಗಳು ..	299	280	10	3	..	..

ಗುಬ್ಬಿ ತಾಲ್ಲೂಕು ಚನ್ನಸಟ್ಟಹಳ್ಳಿ ನಿಟಗುಂಟ ಪ್ಲಾಂಟೇರ್ಷ, 21ನೇ ಡಿಸೆಂಬರ್ 1896ನೇ ಇಸವಿ.

ತರಹೆ.	ನಂಬರ್.	ಸಲೆ.			ಪರಾ.
		ಅಡಿ.	ಅಂಗುಲ.	ಸೆಂಟ್ಸ್.	
ಕ್ಯಾಸರೀನ ತೀರುಗಳು ..	1841	..	..	..	ನಿಂತಿರುವ ವಣ ಮರಗಳು.

ಷರತ್ತುಗಳು.—ಹರಾಜು ಮೊಬಲಗು ಪಾವತಿ ಆದ ತಾರೀಖು ಲಾಗಾಯತು ಇದರ ನಿಗೇವಾನಿ ಹರಾಜುದಾರನ್ನೇ ಹೊಂದಿರುತ್ತೆ.

ಹರಾಜು ಖೈದಾದ ಕೂಡ್ಲೆ ಕಾಲು ಹಿಕ್ಕೆ ಮೊಬಲಗು ತೇವಣಿ ತರೀಕ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನು ಹರಾಜು ತಾರೀಖು ಲಾಗಾಯತು ಒಂದು ವಾರದ ವಳಗಾಗಿ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ದುಸರೇ ಹರಾಜು ಮಾಡಲ್ಪಡುವದಲ್ಲದೆ ಲುಕ್ಸಾನಿಗೆ ಮೊದಲು ಹರಾಜುದಾರನ್ನು ಗುರಿಮಾಡಲ್ಪಡುತ್ತೆ. ಸಾಮಾನುಗಳನ್ನೆಲ್ಲಾ ಹಣ ಪಾವತಿ ಮಾಡಿದ ತಾರೀಖು ಲಾಗಾಯತು 5 ದಿವಸಗಳೊಳಗಾಗಿ ಸಾಗಿಸಿಕೊಳ್ಳಬೇಕು. ಪ್ಲಾಂಟೇರ್ಷಗಳಲ್ಲಿ ವಣಿಗೆ ನಿಂತಿರುವ ಕ್ಯಾಸರೀನ ಮರಗಳು ಗುರ್ತು ಮಾಡಿ ನಂಬರು ಹಾಕಲ್ಪಟ್ಟಿರುತ್ತವೆ. ಖರೀದಿದಾರನು ಗುರ್ತು ಮಾಡಿರುವ ವಣ ಮರಗಳನ್ನು ಮಾತ್ರವೇ ಕಡಿದು 1896ನೇ ಇಸವಿ ಡಿಸೆಂಬರ್ ಆಖೈರ್ ವಳಗಾಗಿ ಸದರೀ ಮರಗಳನ್ನು ಪ್ಲಾಂಟೇರ್ಷಗಳ ಹದ್ದು ಬಸ್ತು ಹೊರಭಾಗದಲ್ಲಿರುವ ಫ್ಯೆರ್ಲೈ ಪ್ರದೇಶಕ್ಕೆ ಸಾಗಿಸಬೇಕು. ತರುವಾಯ ಆ ಮರಗಳು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ ಆಜವಾಯಿಷಿ ಆದ ನಂತರ ಅವಶ್ಯಕವಾದ ರಹದಾರಿ ನಿಶಿ 1897ನೇ ಇಸವಿ ಜನವರಿ 15ರ ವಳಗಾಗಿ ಸಾಗಿಸಬೇಕು. ಖರೀದಿದಾರನಾಗಲಿ ಅಥವಾ ಅವನ ಕಡೆ ಜನಗಳಾಗಲಿ ಯಾವ ವಿಧವಾದ ಅಕ್ರಮ ನಡಸಿದ್ದೇ ಆದರೆ ಖರೀದಿಗೆ ಪಡದುಕೊಂಡಿರತಕ್ಕ ಮರಗಳನ್ನು ಸರ್ಕಾರಕ್ಕೆ ದಂಡನಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ 1878ನೇ ಇಸವಿ ಮೈಸೂರ್ ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನ್ ಪ್ರಕಾರ ಕ್ರಿಮಿನಲ್ ಶಿಕ್ಷೆಗೆ ಖರೀದಿದಾರನ್ನು ಗುರಿಮಾಡಲ್ಪಡುತ್ತೆ.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಮದ್ದಗಿರಿ ಸಬ್ ಡಿವಿಜ್ ಮುನಸಿಫ್ ಕೋರ್ಟಿನಿಂದ.

ಸ್ ೧೮೯೪—೯೫ನೇ ಇಸವಿ ಸಿವಿಲ್ ಜರಿಜನಲ್ ನಂಬರ್ 418.

ಮುನಸೀಫ್ ಡಿ. ಯಂ. ನರಸಿಂಗರಾವ್ ಯಸ್ಕ್ವಯರ್, ಬಿ. ಎ. ಬಿ. ಎಲ್. ಯವರ ರೂಬರೂಬ್.

ವಾದಿಗಳು.	ಪ್ರತಿವಾದಿ.
೫ರಾ ಕಸಬಾದಲ್ಲಿರುವರು 1ನೇ ಅಕ್ಕಬರ್‌ಸಾಬಿ. 2ನೇ ಇವಾವು ಮೊಹರ್ದಿಸಾಬಿ. 3ನೇ ಉಸುಮ್ಯಾಸಾಬಿ. 4ನೇ ಅಕ್ಕಬರ್‌ಖಾ. 5ನೇ ಹೈದರಸಾಬಿ.	೫ರಾದಲ್ಲಿರುವ ರಾಜಾಅಹಮದ್ ಸಾಬಿ.

ಸಿವಿಲ್ ಪ್ರೊಸಿಜ್ಯೂರ್ ಕೋಡ್ 30ನೇ ಸೆಕ್ಷನ್ ವೇರೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ತುಮಕೂರು ಡಿಸ್ಟ್ರಿಕ್ಟು ೫ರಾ ತಾಲ್ಲೂಕು ೫ರಾ ಕಸಬಾದಲ್ಲಿರುವ ಮಂಗಳವಾರಪೇಟೆಯಲ್ಲಿ ಪೂರ್ವಕ್ಕೆ ಆದ್ಯಪ್ಪನ ಮನೆ, ಪಶ್ಚಿಮಕ್ಕೆ ಶೇತುವೆನೀರು ಹೋಗುವನಾಲಾ, ಉತ್ತರಕ್ಕೆ ತಿರಗಾಡುವ ದಾರಿ, ದಕ್ಷಿಣಕ್ಕೆ ಹೈರೋಡ್ ಈ ಮಧ್ಯೆ ಇರುವ ನಿವೇಶನದಲ್ಲಿ ಮಹಂಮದಿ ಜಾತಿಜನಗಳು ಬಾರಾಯಿಮಾನು ಪಂಜಾ ಕೂಡಿಸುವ ಆಪರ್‌ಖಾನ ಜಾಗಕ್ಕೆ ಸಂಬಂಧಪಟ್ಟದ್ದಿಂತಲೂ (b) ಇತರರು 1ನೇ ಪ್ರತಿವಾದಿಗೆ ಕ್ರಯ ಮಾಡಲು ಯಾವ ವಿಧವಾದ ಹಕ್ಕೂ ಇಲ್ಲವೆಂತಲೂ (c) ಪ್ರತಿವಾದಿಯು ಇತರ ಜನಗಳಿಂದ ಪಡದು ಇರುವ ಕ್ರಯಸಾಧನದಂತೆ ಹೊಂದಿರುವ ಡಿಕ್ರಿಯು ಮತ್ತು ಕ್ರಯಪತ್ರವು ಅಸಿದ್ಧವಾಗಿರತಕ್ಕದೆಂತಲೂ (d) ಈ ಪ್ರತಿವಾದಿ ಯಿಂದ ವಾದಿಗಳು ಪೂರ್ವದಂತೆ ದಾವಾ ನಿವೇಶನವನ್ನು ತಮ್ಮ

ಹಕ್ಕು ಸ್ಥಾಪನೆಯಿಂದ ಸ್ವಾಧೀನ ಮಾಡಿಕೊಂಡು ಅವಿಚ್ಛಿನ್ನವಾಗಿ ಸದರೀ ಪಂಜಾ ಕೂಡಿಸಲು ವಾದಿಗಳು ಅಮಜರೆಂತಲೂ ಮೇಲ್ಕಂಡ ವಾದಿಗಳು ಈ ಕೋರ್ಟಿನಲ್ಲಿ ದಾವೆ ಮಾಡಿದ್ದಾರೆ.

ಈ ದಾವಾಕ್ಕೆ ಕಕ್ಷಿಗಾರರಾಗಿ ಕೇವಲಪೇಕ್ಷೆ ಇರುವ ದರೋಬಸ್ತು ಜನಗಳು ಈ ಮೊಕದ್ದಮೆ ಹಿಯರಿಂಗ್ ಯಿಟ್ಟು ಇರುವ 1896ನೇ ಇಸವಿ ಡಿಸೆಂಬರ್ 10ನೇ ತಾರೀಖು ದಿವಿ 11 ಘಂಟೆಗೆ ಮದ್ದಗಿರಿ ಮೊಕ್ಕಾಂ ನಮ್ಮ ಕೋರ್ಟು ರೂಬರೂಬ್ ಹಾಜರಾಗ ತಕ್ಕದ್ದಿದೆ.

ತಾರೀಖು 13ನೇ ನವಂಬರ್ 1896ನೇ ಇಸವಿ.

ಡಿ. ಯಂ. ನರಸಿಂಗರಾವ್,
ಮುನ್ಸಿಫ್.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ:—ಸ್ ೧೮೯೬—97ನೇ ಸಾಲಿಗೆ (ಅಂದರೆ 1896ನೇ ಜುಲೈ ಗುರ್ಯಲಾಗಾಯತು 1897ನೇ ಜೂನ್ 30ರ ವರಿಗೆ) ಮದ್ದಗಿರಿ ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜವಾಯಿಸತಕ್ಕ ಹಕ್ಕನ್ನ ಮದ್ದಗಿರಿ ತಾಲ್ಲೂಕು ಕಚೇರಿಯಲ್ಲಿ 1896ನೇ ಡಿಸೆಂಬರ್ 28ನೇ ತಾರೀಖಿನ ಬೆಳ್ಗೆ 11 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್ದಾರು ಅಥವಾ ಶಿರಸ್ತೇದಾರು ಹರಾಜು ಮಾಡಿಸುತ್ತಾರೆ.

3. ಛಡಸವಾಲ್ ಅಂಗೀಕರಿಸತಕ್ಕದ್ದು ತುಮಕೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡಬೇಕು; ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಛಡಸವಾಲ್‌ದಾರರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ ಮಾಡಬೇಕಲ್ಲದೆ ಹರಾಜು ಮಂಜೂರ್ ಮಾಡಲ್ಪಟ್ಟ ಸಂಗತಿ ಅಮಲ್ದಾರರಿಂದ ಛಡಸವಾಲ್‌ದಾರರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಛಡಸವಾಲ್ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆಯಂತಾಗುವ ಲೋಕಲ್‌ಸೆಸ್ ದೇಖೀಲ್ ಛಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಯಿಟ್ಟು ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ. ಹಾಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡದಿದ್ದರೂ ಅಥವಾ ಬಾಕಿ ಮೊಬಲಗು ಪಾವತಿ ಮಾಡದಿದ್ದರೂ ಸದರೀ ಹಕ್ಕುದಾರಿಯು ಛಡಸವಾಲ್‌ದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಬಳಪಟ್ಟು ಪುನಹ ವಿಕ್ರಯಿಸಲ್ಪಡುತ್ತೆ.

6. ಇಜಾರ್‌ದಾರರು ಹಿಡುವಳಿ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರ್ರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಆಥವಾ ಇಜಾರದಾರರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರರ ಹಕ್ಕಿಗೆ ಆತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರದಾರ್ರ ಅಭ್ಯಂತರವೇನು ಇರುವದಿಲ್ಲ. ಪರಂತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನು ಜವಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರರು ಅಗಿಯಕೂಡದು. ಬಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನು ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜವಾಯಿಸಲ್ಪಟ್ಟ ಗ್ರಾಮ, ಯಿಪ್ಪು ಮಣ ಕಲ್ಲುಗಳು ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಪ್ಸೀಲ್‌ಗಳು ನಮೂದು ಕಂಡು ಆಯಾ ತಾಲ್ಲೂಕು ಅಮಲ್ದಾರ್ರಿಂದ ಮಾಫಿ ಲೈಸೆನ್ಸನ್ನು ಪಡಿಯದೆ ಕಲ್ಲುಗಳನ್ನು ಇಜಾರೇದಾರರು ಸಾಗಿಸ ಕೂಡದು.

ಎಂ. ನಾರಾಯಣರಾವ್,
ಡೆಪ್ಯುಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ ೧೮೯೬—97ನೇ ಇಸವಿ ಅರ್ಜೀ ನಂಬರ್ 181.

ಅರ್ಜೀದಾರ ಅರಕೇರೆ ತಾಲ್ಲೂಕು ಕಸಬಾ ಹೋಬಳಿ ದುಮ್ಮೇನಹಳ್ಳಿ ಗ್ರಾಮದಲ್ಲಿರುವ ಶಿವಾಚಾರದ ಚಿಕ್ಕರಾಮೇಗವ್ವನ ಮಗ ಪಟೇಲ್ ರಾಮಜ್ಜೇಗವ್ವೆರು ಮೈನರಾದ ಸದರೀ ಸ್ಥಳದ ರಾಮಿಗಾ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ರಾಮಿಗೆ ಅಜ್ಜ ಆಗಬೇಕೆಂಬ ಹಕ್ಕಿನ ಮೇಲೆ ಸದರೀ ದುಮ್ಮೇನಹಳ್ಳಿ ಗ್ರಾಮದ ಸ್ಥಳದ ಪಟೇಲ್ ರಾಮಜ್ಜೇಗವ್ವೆರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ.

ಸದರೀ ಅರ್ಜಿ ಹಿಯರಿಂಗ್ ಬಗ್ಯೆ 1896ನೇ ಇಸವಿ ಡಿಸೆಂಬರ್ ತಾರೀಖು 14ರಲ್ಲು ಮೊಕರರು ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

1896ನೇ ಇಸವಿ ನವಂಬರ್ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ಕತ್ತೊಡನೆ ಕೊಡೋಣಾಗಿದೆ.

ಸ್ ೧೮೯೬—97ನೇ ಇಸವಿ ಅರ್ಜೀ ನಂಬರ್ 189.

ಮೃತಪಟ್ಟ ಚಿಕ್ಕಪದ್ಮಣ್ಣ ಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಪುಟ್ಟಸ್ವಾಮಿ ಶೆಟ್ಟರು ಮೃತಪಟ್ಟ ಸದರೀ ಚಿಕ್ಕಪದ್ಮಣ್ಣ ಶೆಟ್ಟರಿಗೆ ತಮ್ಮ ಆಗಬೇಕೆಂಬ ಹಕ್ಕುದಾರಿ ಮೇಲೆ ಹೆಗ್ಗಡದೇವನಕೋಟೆ ತಾಲ್ಲೂಕು ಕಸಬಾ ಸರಗೂರು ಸ್ಥಳದ ಸದರೀ ಪುಟ್ಟಸ್ವಾಮಿ ಶೆಟ್ಟರು ಸದರೀ ವಾಸಸ್ಥರಾಗಿ ಮೃತಪಟ್ಟ ಚಿಕ್ಕಪದ್ಮಣಶೆಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 1 000 ರೂ. ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪಾಯಿಫ್ ಮಾಡಿರುತ್ತಾರೆ.